ವಿಷಯ :– ಒಣ ಭೂಮಿ ಅಭಿವೃದ್ಧಿ ಯೋಜನೆ
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 437 (714) :

ಶ್ರೀ ಬಿ. ಶಿವರಾಮ್ (ಗಂಡಸಿ) :– ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೇವಿಹಳ್ಳಿ ಜಲಾನಯನ ಅಭಿವೃದ್ಧಿ ಯೋಜನೆಯಲ್ಲಿ ತೋಟಗಾರಿಕೆ ವಿಭಾಗದ ಅಭಿವೃದ್ಧಿ-ಕಾರ್ಯಕ್ರಮಗಳೇನು ?

ಆ) 1984–85 ರಿಂದ 1990–91 ರ ವರೆಗೆ ಹಾಕಿಕೊಂಡಿರುವ ಕಾರ್ಯಕ್ರಮ, ಗುರಿ ಸಾಧನೆ ಮತ್ತು ಒದಗಿಸಿರುವ ಹಣವೆಷ್ಟು ?

ಇ) ನಿಗದಿತ ಗುರಿಗಿಂತ ಕಡಿಮೆ ಹಣ ಒದಗಿಸಿದ್ದರೆ, ಹಣವನ್ನು ಒದಗಿಸಿ, ಯೋಜಿತ ಗುರಿ ಮತ್ತು ಕಾರ್ಯಕ್ರಮವನ್ನು ಪೂರ್ಣಗೊಳಿಸುವ ಯೋಜನೆ ಇದೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :–

ಅ) ಖಾಸಗಿ ಜಮೀನುಗಳಲ್ಲಿ ಮಿಶ್ರ ತೋಟಗಾರಿಕೆ ಅಭಿವೃದ್ಧಿ, ಸಾರ್ವಜನಿಕ ಪ್ರದೇಶದಲ್ಲಿ ಸೀಲ್ಕ್-ಹಾರ್ಟಿಕಲ್ಚರ್ ಶಾಲೆಗಳಲ್ಲಿ ತೋಟ ಅಭಿವೃದ್ಧಿ, ನೀರು ಶೇಖರಿಸುವ ಸ್ಥಳಗಳಲ್ಲಿ ಮಣ್ಣಿನ ಗಿಡಗಳನ್ನು ನೆಡುವುದು ತೋಟಗಾರಿಕೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಆ) 1984–85 ರಿಂದ 1990–91 ರ ವರೆಗಿನ ಆರ್ಥಿಕ ಕಾರ್ಯಕ್ರಮ ಮತ್ತು ಪ್ರಗತಿಯು ಕೆಳಕಂಡಂತೆ ಇವೆ.

ವರ್ಷ	ಗುರಿ	ಪ್ರಗತಿ	ಬಿಡುಗಡೆಯಾದ ಹಣ
		ಲಕ್ಷ ರೂ.ಗಳಲ್ಲಿ	
1984–85	2.96	2.960	2.96
1985–86	32.56	31.550	31.55
1986–87	71.53	67.277	70.10
1987–88	69.49	76.485	76.49
1988–89	78.064	70.903	70.91
1989–90	86.53	38.140	38.14
1990–91	94.25	18.850	18.85
ಒಟ್ಟು :	435.384	306.165	309.00

ಇ) ಇದೆ.

ವಿಷಯ : ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳ ಸಂಖ್ಯೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 438 (651)

ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳ ಸಂಖ್ಯೆ ಎಷ್ಟು ? (ವಿವರವಾದ ಮಾಹಿತಿ ಒದಗಿಸುವುದು)

ಆ) ಅವುಗಳಲ್ಲಿ ಪೂರ್ಣಗೊಂಡಿರುವ ಯೋಜನೆಗಳ ಸಂಖ್ಯೆ ಎಷ್ಟು ?

ಇ) ಇನ್ನೂ ಪೂರ್ಣಗೊಳ್ಳಬೇಕಾದ ಯೋಜನೆಗಳ ಸಂಖ್ಯೆ ಎಷ್ಟು ? ಮತ್ತು ಅದಕ್ಕೆ ಕಾರಣಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು):–

ಅ) ನಲ್ಲಿ ನೀರು ಸರಬರಾಜು ಯೋಜನೆಗಳು – 75
ಕಿರುನೀರು ಸರಬರಾಜು ಯೋಜನೆಗಳು – 74
(ವಿವರಗಳನ್ನು ಲಗತ್ತಿಸಲಾಗಿದೆ.) *